ಡನ್ನೋನ ಸಾಹಸ ಕಥೆಗಳು

15

ನಿಕೋಲಾಯ್ ನೋಸೊವ್



ಆಸ್ಪತ್ರೆಯಲ್ಲಿ ಡನ್ನೋ



ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್ 15

ಆಸ್ಪತ್ರೆಯಲ್ಲಿ ಡನ್ನೋ

ಚಿತ್ರಗಳು: ಬೋರಿಸ್ ಕಲೌಶಿನ್
ಕನ್ನಡಕ್ಕೆ ಪ್ರಭಾಕರ ನಾನಾವಟಿ



RADUGA PUBLISHERS
MOSCOW





ಅವರು ಬಾಗಿಲಿನ ಬಳಿಗೆ ಹೋದರು, ಸ್ನೋಡ್ರಾಪ್ ಒಂದು ಪುಟ್ಟ ಗಂಟೆಯನ್ನು ಬಾರಿಸಿದಳು, ಅದು “ಟ್ರಿಂಗ್ ಟ್ರಿಂಗ್ ಟ್ರಿಂಗ್” ಎಂದು ಮೊಳಗಿತು. ಬಿಳಿ ಸ್ಮಾಕ್ ಮತ್ತು ಟೊಪ್ಪಿಗೆ ಧರಿಸಿದ್ದ, ಹಣೆಯ ಮೇಲೆ ಬಂಗಾರದ ಬಣ್ಣದ ಸುರುಳಿಯ ಕೂದಲುಗಳ ಸಾಲು ಮೇಲಿಂದ ಕೆಳಗೆ ಕುಣಿಯುತ್ತಿದ್ದ ನರ್ಸ್ ಬಾಗಿಲು ತೆರೆದಳು.

“ದೇವರೇ! ಇನ್ನೊಬ್ಬ ರೋಗಿ!” ಅವನನ್ನು ನೋಡಿದ ಕೂಡಲೇ ಅವಳು ಉಸಿರುಗಟ್ಟುತ್ತಾ ಹೇಳಿದಳು. “ಅವನನ್ನು ಇರಿಸಲು ಜಾಗವೇ ಇಲ್ಲ, ನನ್ನ ಮಾತನ್ನು ನಂಬಿ! ಜಗತ್ತಿನ ಯಾವ ಮೂಲೆಯಿಂದ ಇವರೆಲ್ಲ ಬಂದಿದ್ದಾರೆ? ಇಡೀ ಒಂದು ವರ್ಷ ನಮ್ಮ ಆಸ್ಪತ್ರೆ ಖಾಲಿಯಾಗಿತ್ತು, ಆದರೆ ಇಂದು ನಾವು ಹದಿನಾಲ್ಕು ರೋಗಿಗಳನ್ನು ದಾಖಲು ಮಾಡಿಕೊಂಡಿದ್ದೇವೆ!”

“ಇವನು ರೋಗಿಯಲ್ಲ,” ಸ್ನೋಡ್ರಾಪ್ ಹೇಳಿದಳು. “ತನ್ನ ಸ್ನೇಹಿತರನ್ನು ನೋಡಲು ಬಂದಿದ್ದಾನೆ.”

“ಓಹ್, ಹಾಗಾದರೆ ಒಳಗೆ ಬನ್ನಿ.”

ಮೂವರೂ ಡಾಕ್ಟರರ ಕೋಣೆಯೊಳಗೆ ಹೋದರು. ಅಲ್ಲಿ ಹನಿಸಕಲ್ ಒಂದು ಮೇಜಿನ ಬಳಿ ಕುಳಿತಿರುವುದನ್ನು ಅವರು ಕಂಡರು. ಅವಳ ಮುಂದೆ ಕಾರ್ಡ್‌ಗಳ ಒಂದು ರಾಶಿ ಇತ್ತು; ಪ್ರತಿಯೊಬ್ಬ ರೋಗಿಗೆ ಏನು ತೊಂದರೆಯಾಗಿದೆ ಎಂಬುದನ್ನು ಅವಳು ಅವುಗಳ ಮೇಲೆ ಬರೆಯುತ್ತಿದ್ದಳು. ಸ್ನೋಡ್ರಾಪ್ ಮತ್ತು ಕಾರ್ನ್‌ಫ್ಲವರ್‌ರನ್ನು ಕಂಡ ತಕ್ಷಣವೇ ಅವಳು ಹೇಳಿದಳು:

“ನೀವು ರೋಗಿಗಳನ್ನು ನೋಡಲು ಬಂದ ಹಾಗೆ ಕಾಣುತ್ತದೆ. ನಾನು ಅದಕ್ಕೆ ಅವಕಾಶ ಕೊಡಲಾರೆ. ರೋಗಿಗಳಿಗೆ ಶಾಂತಿ ಮತ್ತು ನೆಮ್ಮದಿ ಬೇಕು ಎಂಬುದನ್ನು ನೀವು ಮರೆತ ಹಾಗೆ ಕಾಣುತ್ತದೆ. ಇದೇನು, ನಿನ್ನ ಹಣೆಯ ಮೇಲೆ, ಕಾರ್ನ್‌ಫ್ಲವರ್ – ಪ್ಲಾಸ್ಟರ್? ಜಾಣ ಹುಡುಗಿ! ಹೀಗಾಗುತ್ತದೆ ಎಂದು ನಾನು ಮೊದಲೇ ಎಚ್ಚರಿಸಿದ್ದೆ. ಆ ಮೈಟ್ಸಹುಡುಗರು ಎಷ್ಟು ಅಪಾಯಕಾರಿಗಳು ಎಂಬುದು ನನಗಿಂತ ಚೆನ್ನಾಗಿ ಯಾರಿಗೂ ಗೊತ್ತಿಲ್ಲ. ಅವರಲ್ಲಿ ಒಬ್ಬನನ್ನು ಮನೆಯೊಳಗೆ ಬಿಟ್ಟರೆ, ಒದೆ ಮತ್ತು ಮೂಗಿನ ಮೇಲೆ ಹೊಡೆತ ಇವುಗಳ ಹೊರತು ಬೇರೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ.”

“ನಮಗೆ ರೋಗಿಗಳನ್ನು ನೋಡಬೇಕಿಲ್ಲ,” ಎಂದಳು ಸ್ನೋಡ್ರಾಪ್. “ಅವನಿಗೆ ನೋಡಬೇಕಾಗಿದೆ. ಅವರೆಲ್ಲ ಅವನ ಸ್ನೇಹಿತರು.”

“ಈ ಮೈಟ್ಸಹುಡುಗನಿಗೆ ಹಾಸಿಗೆಯಲ್ಲೇ ಇರಲು ನಾನು ಹೇಳಿದ್ದೆ, ಆದರೆ ಡಾಕ್ಟರ ಆದೇಶವನ್ನು ಧಿಕ್ಕರಿಸಿ ಇಲ್ಲಿ ಬಂದಿದ್ದಾನೆ, ಎದ್ದು ಓಡಾಡುತ್ತಿದ್ದಾನೆ ಮತ್ತು ಎಲ್ಲರೊಂದಿಗೂ ಜಗಳಕ್ಕೆ ಇಳಿಯುತ್ತಿದ್ದಾನೆ. ನಾನು ಅವನನ್ನು ಇಲ್ಲಿ ಒಳಗೆ ಬಿಡಲಾರೆ. ಆಸ್ಪತ್ರೆ ಜಗಳಾಡುವ ಜಾಗವಲ್ಲ.”

“ನಾನು ಜಗಳ ಮಾಡುವುದಿಲ್ಲ,” ಎಂದನು ಡನ್ನೋ.

“ಓಹ್, ನೀನು ಮಾಡುವುದಿಲ್ಲವಂತೆ, ಅಲ್ಲವೇ?” ಎಂದು ಹನಿಸಕಲ್ ಜೋರಾಗಿ ಹೇಳುತ್ತಾ, ತನ್ನ ತುತ್ತೂರಿಯನ್ನು ಮೇಜಿನ ಮೇಲೆ ಬಡಿದಳು. “ಮೈಟ್ಸಹುಡುಗರು ಯಾವಾಗಲೂ ಜಗಳಾಡುವದಿಲ್ಲ ಎಂದು ಹೇಳುತ್ತಾರೆ, ಆದರೆ ಅವರು ಯಾವಾಗಲೂ ಜಗಳಾಡುತ್ತಾರೆ.”

ವಿಷಯ ಮುಗಿಯಿತು ಎಂದು ಹನಿಸಕಲ್ ಭಾವಿಸಿದಂತಿತ್ತು; ಅವಳು ಕಾರ್ನ್‌ಫ್ಲವರ್‌ನತ್ತ ತಿರುಗಿ, “ನಿನ್ನ ಹಣೆಯನ್ನು ತೋರಿಸಮ್ಮ ,” ಎಂದಳು. ಅವಳು ಪ್ಲಾಸ್ಟರ್‌ನ್ನು ತೆಗೆದು, ನೋವಿರುವ ಜಾಗವನ್ನು ಪರೀಕ್ಷಿಸಿದಳು.

“ಇನ್ನು ಮುಂದೆ ನೀನು ಈ ಪ್ಲಾಸ್ಟರ್‌ನ್ನು ಧರಿಸಬೇಕಾಗಿಲ್ಲ,” ಪರೀಕ್ಷಿಸಿದ ಮೇಲೆ ಅವಳು ಹೇಳಿದಳು. “ನನ್ನೊಂದಿಗೆ ಬಾಮ್ಮಾ, ನಿನ್ನ ಬಡಿತದ ಜಾಗ ಕಪ್ಪು ನೀಲಿ ಬಣ್ಣಕ್ಕೆ ತಿರುಗದಂತೆ ನಾನು ಅದಕ್ಕೆ ಅಲ್ಟ್ರಾ ವ್ಹಾಯೊಲೆಟ್ ಕಿರಣಗಳಿಂದ ಚಿಕಿತ್ಸೆ ಕೊಡುತ್ತೇನೆ.”

ಅವಳು ಮತ್ತು ಕಾರ್ನ್‌ಫ್ಲವರ್ ಕೋಣೆಯಿಂದ ಹೊರಗೆ ಹೋದರು. ಅವರು ಹೊರಟ ಕೂಡಲೇ ಡನ್ನೋ ಒಂದು ಬಿಳಿ ಅಪ್ರಾನ್ ಮತ್ತು ಟೊಪ್ಪಿಗೆಗಳು ನೇತಾಡುತ್ತಿರುವುದನ್ನು ಕಂಡನು. ಅವನು ತಕ್ಷಣ ಅವುಗಳನ್ನು ಧರಿಸಿಕೊಂಡನು, ಹಾಗೆಯೇ ಹನಿಸಕಲ್ ಮೇಜಿನ ಮೇಲೆ ಬಿಟ್ಟುಹೋಗಿದ್ದ ಒಂದು ಜೋಡಿ ಕನ್ನಡಕವನ್ನೂ ಹಾಕಿಕೊಂಡನು. ನಂತರ ಅವಳ ತುತ್ತೂರಿಯನ್ನು ತೆಗೆದುಕೊಂಡು ಕೋಣೆಯಿಂದ ಹೊರಗೆ ಬಿದ್ದನು. ಸ್ನೋಡ್ರಾಪ್ ವಿಸ್ಮಯ ಮತ್ತು ಮೆಚ್ಚುಗೆಯಿಂದ ಅವನನ್ನು ನೋಡುತ್ತ ನಿಂತಳು..





ಅವನು ದಾರಿಯುದ್ದಕ್ಕೂ ಹೋಗಿ, ಅವನ ಸ್ನೇಹಿತರು ಮಲಗಿದ್ದ ವಾರ್ಡ್‌ದ ಬಾಗಿಲನ್ನು ತೆರೆದನು. ಮೊದಲ ಹಾಸಿಗೆಯಲ್ಲಿ ಅವನಿಗೆ ಗ್ರಂಪ್ಸ್ ಕಾಣಿಸಿಕೊಂಡನು; ಅವನು ಎಂದಿಗಿಂತಲೂ ಹೆಚ್ಚು ಮುನಿಸಿಕೊಂಡು ಸಿಟ್ಟಿನಲ್ಲಿದ್ದಂತೆ ಕಾಣುತ್ತಿದ್ದನು.

'ನನ್ನ ಸ್ನೇಹಿತನೇ, ನಿನಗೆ ಹೇಗೆ ಅನ್ನಿಸುತ್ತಿದೆ?" ಎಂದು ಡನ್ನೋ ತನ್ನ ಧ್ವನಿಯನ್ನು ಬದಲಾಯಿಸುತ್ತಾ ಕೇಳಿದನು.

'ಅದ್ಭುತ!' ಎಂದು ಗ್ರಂಪ್ಸ್ ಸಾಯಲಿರುವವನಂತೆ ಮುಖ ಮಾಡಿಕೊಂಡು ಹೇಳಿದನು.

'ದಯವಿಟ್ಟು ಎದ್ದು ಕುಳಿತುಕೋ," ಎಂದು ಡನ್ನೋ ಹೇಳಿದನು.

ಗ್ರಂಪ್ಸ್ ಬಹಳ ಪ್ರಯಾಸಪಟ್ಟು ಎದ್ದು ಕುಳಿತುಕೊಂಡು, ನಿರಾಸಕ್ತಿಯಿಂದ ನೋಡುತ್ತಿದ್ದನು. ಡನ್ನೋ ತುತ್ತೂರಿಯನ್ನು ಅವನ ಎದೆಯ ಮೇಲಿಟ್ಟನು.

'ದಯವಿಟ್ಟು ಆಳವಾಗಿ ಉಸಿರೆಳೆ," ಎಂದು ಅವನು ಹೇಳಿದನು.

'ಒಬ್ಬ ಮನುಷ್ಯನಿಗೆ ಸ್ವಲ್ಪವಾದರೂ ನೆಮ್ಮದಿ ಕೊಡಲು ಆಗುವುದಿಲ್ಲವೇ?" ಎಂದು ಗ್ರಂಪ್ಸ್ ಗೊಣಗಿದನು. ''ಎದ್ದು ಕುಳಿತುಕೋ!' 'ಮಲಗು!' 'ಆಳವಾಗಿ ಉಸಿರೆಳೆ!' 'ಉಸಿರಾಡಿಸುವದನ್ನು ನಿಲ್ಲಿಸು!'"

ಡನ್ನೋ ತುತ್ತೂರಿಯಿಂದ ಅವನ ತಲೆಯ ಮೇಲೆ ಮೆಲ್ಲಗೆ ಒಂದು ಏಟು ಕೊಟ್ಟನು.

'ಗ್ರಂಪ್ಸ್, ನೀನು ಸ್ವಲ್ಪವೂ ಬದಲಾಗಿಲ್ಲ," ಎಂದು ಅವನು ಹೇಳಿದನು.

“ಡನ್ನೋ!” ಅವನನ್ನು ನೋಡಿ ಆಶ್ಚರ್ಯಗೊಂಡು ಅವನು ಹೇಳಿದನು.
“ಶ್   ಶ್!” ಎಂದು ಡನ್ನೋ ಎಚ್ಚರಿಸಿದನು.
“ಕೇಳು, ಡನ್ನೋ, ನನ್ನನ್ನು ಇಲ್ಲಿಂದ ಹೊರಬೀಳಲು ಸಹಾಯ ಮಾಡು,” ಎಂದು ಗ್ರಂಪ್ಸ್ ಪಿಸುಗುಟ್ಟಿದನು. “ನಾನು ಸಂಪೂರ್ಣವಾಗಿ ಚೆನ್ನಾಗಿದ್ದೇನೆ, ನಿಜವಾಗಿಯೂ. ನನ್ನ ಮೊಣಕಾಲಿಗೆ ಸ್ವಲ್ಪ ಪೆಟ್ಟು ಮಾಡಿಕೊಂಡೆ ಅಷ್ಟೇ. ಈಗ ಅದಕ್ಕೆ ನೋವೂ ಇಲ್ಲ, ಆದರೆ ಅವರು ನನ್ನ ಬಟ್ಟೆಗಳನ್ನು ಕೊಡುತ್ತಿಲ್ಲ. ನಾನು ಇಲ್ಲಿ ಹುಚ್ಚನಾಗಿಬಿಡುತ್ತೇನೆ. ನಾನು ಎದ್ದು ಹೊರಗೆ ಹೋಗಬೇಕು.”
ಗ್ರಂಪ್ಸ್ ಡನ್ನೋನ ತೋಳನ್ನು ಗಟ್ಟಿಯಾಗಿ ಹಿಡಿದುಕೊಂಡು ಬಿಡಲೇ ಇಲ್ಲ.
“ನಾನು ಏನಾದರೂ ಮಾಡುತ್ತೇನೆ,” ಎಂದು ಡನ್ನೋ ಹೇಳಿದನು. “ಇನ್ನೂ ಸ್ವಲ್ಪ ತಾಳ್ಮೆಯಿಂದಿರು. ನಾನು ಹೇಳಿದಂತೆ ಮಾಡುವೆ ಎಂದು ಮಾತುಕೊಡು, ಮತ್ತು ಯಾರಾದರೂ ಆ ಬಲೂನನ್ನು ಯಾರು ತಯಾರಿಸಿದರು ಎಂದು ಕೇಳಿದರೆ, ನಾನೇ ತಯಾರಿಸಿದೆ ಎಂದು ಹೇಳು, ಸರಿಯೇ?”
“ನೀನು ನನ್ನನ್ನು ಇಲ್ಲಿಂದ ಹೊರಗೆ ಕರೆದುಕೊಂಡು ಹೋದರೆ, ನಿನಗೆ ಇಷ್ಟವಾದದ್ದನ್ನೇ ನಾನು ಹೇಳುತ್ತೇನೆ,” ಎಂದು ಗ್ರಂಪ್ಸ್ ಹೇಳಿದನು..





“ಅದರ ವಿಚಾರ ನನ್ನ ಮೇಲೆ ಬಿಡು,” ಎಂದು ಡನ್ನೋ ಅಪಾರ ಆತ್ಮವಿಶ್ವಾಸದಿಂದ ಹೇಳಿದನು.

ನಂತರ ಅವನು ಮುಂದಿನ ಹಾಸಿಗೆಯ ಬಳಿಗೆ ಹೋದನು, ಅಲ್ಲಿ ಡಾ. ಪಿಲ್‌ಮನ್‌ಮಲಗಿದ್ದನು.

“ನನ್ನನ್ನು ಉಳಿಸು!” ಎಂದು ಡಾ. ಪಿಲ್‌ಮನ್‌ಹತಾಶನಾಗಿ ಪಿಸುಗುಟ್ಟಿದನು. “ಒಮ್ಮೆ ಯೋಚಿಸಿ ನೋಡು! ನನ್ನ ಜೀವನವಿಡೀ ನಾನು ಜನರನ್ನು ಗುಣಪಡಿಸುತ್ತಾ ಬಂದಿದ್ದೇನೆ, ಈಗ ಅವರು ನನ್ನನ್ನೇ ಗುಣಪಡಿಸಲು ಹೊರಟಿದ್ದಾರೆ!”

“ಅವರು ಹಾಗೆ ಮಾಡಬಾರದಿತ್ತೇ?” ಎಂದು ಡನ್ನೋ ಕೇಳಿದ.

“ಅವರು ಹೇಗೆ ಮಾಡಬಲ್ಲರು!” ಎಂದು ಡಾ. ಪಿಲ್‌ಮನ್ ಹೇಳಿದನು. “ನನಗೆ ಏನೇನೂ ಆಗಿಲ್ಲ. ಮೂಗಿನ ಮೇಲೆ ಒಂದು ಸಣ್ಣ ಗೀರು ಮತ್ತು ಭುಜದ ಮೇಲೆ ಒಂದು ಮೂಗೇಟು ಇದೆ ಎಂಬ ಕಾರಣಕ್ಕೆ ಯಾರಾದರೂ ಆಸ್ಪತ್ರೆಯಲ್ಲಿ ಇರಿಸಿಕೊಳ್ಳಲು ಸಾಧ್ಯವೇ!”

“ಹಾಗಾದರೆ ನಿನ್ನನ್ನು ಇಲ್ಲಿ ಯಾವ ಕಾರಣಕ್ಕಾಗಿ ಇಟ್ಟಿದ್ದಾರೆ?”

“ಅವರಿಗೆ ಬೇರೆ ರೋಗಿಗಳೇ ಸಿಕ್ಕಿಲ್ಲ, ಯಾರನ್ನಾದರೂ ಉಪಚರಿಸಬೇಕೆಂದು ಅವರು ಬಯಸುತ್ತಾರೆ. ಮೈಟ್ಸಹುಡುಗಿಯರು! ಅವರಿಗೆ ಎಲ್ಲವು ಗೊತ್ತಿದ್ದಂತೆ! ಛೀ! ಅವರು ಹೊರಗಡೆ ಪ್ಲಾಸ್ಟರ್‌ಗಳನ್ನು ಹಾಕುವುದು ಮತ್ತು ಒಳಗೆ ಜೇನು ತುಪ್ಪ ಹಚ್ಚುವದು ಅಷ್ಟೇ ಗೊತ್ತು. ಎಲ್ಲವೂ ತಪ್ಪು. ಅವರು ಮಾಡಬೇಕಾದದ್ದು ಹೊರಗಡೆ ಅಯೋಡಿನ್ ಹಚ್ಚಿ, ಒಳಗೆ ಔಡಲ ಎಣ್ಣೆ ಹಚ್ಚುವದು. ಅವರ ವಿಧಾನಗಳನ್ನು ನಾನು ಹೃತ್ಪೂರ್ವಕವಾಗಿ ಒಪ್ಪುವುದಿಲ್ಲ.”

"ನಾನೂ ಹಾಗೆಯೇ," ಎಂದು ಮುಂದಿನ ಹಾಸಿಗೆಯಿಂದ ಪರಹ್ಯಾಪ್ಸ ಹೇಳಿದನು.

"ನಡೆಯಲು ಇಲ್ಲ, ಓಡಲು ಇಲ್ಲ, ಆಡಲು ಇಲ್ಲ, ಕಣ್ಣಾಮುಚ್ಚಾಲೆ ಇಲ್ಲ. ಹಾಡುವುದೂ ಇಲ್ಲ. ಅವರು ನಮ್ಮ ಬಟ್ಟೆಗಳನ್ನೆಲ್ಲ ತೆಗೆದುಕೊಂಡು, ಕರವಸ್ತ್ರಗಳ ಹೊರತು ಬೇರೇನನ್ನೂ ನಮಗೆ ಕೊಡಲಿಲ್ಲ. ನಾವು ಮಾಡಬಹುದಾದದ್ದು ಇಲ್ಲಿಯೇ ಮಲಗಿ ಮೂಗು ಉಬ್ಬಿಸಿಕೊಳ್ಳುವುದು ಮಾತ್ರ."

"ನೀವೆಲ್ಲ ಆಸ್ಪತ್ರೆಗೆ ಹೇಗೆ ಬಂದಿರಿ?"

"ನಿನ್ನೆ ರಾತ್ರಿ ನಾವು ಬುಟ್ಟಿಯಿಂದ ಕೆಳಗೆ ಬಿದ್ದಾಗ ನೆಲದ ಮೇಲೆಯೇ ಮಲಗಿ ನಿದ್ರೆ ಮಾಡಿದೆವು. ಮರುದಿನ ಬೆಳಿಗ್ಗೆ ಕೆಲವು ಮೈಟ್ಸಹುಡುಗಿಯರು ನಮ್ಮನ್ನು ಎಬ್ಬಿಸಿ, ನಾವು ಎಲ್ಲಿಂದ ಬಂದೆವು ಎಂದು ಕೇಳಿದರು. ನಾವು ಅಪಘಾತಕ್ಕೀಡಾದ ಬಲೂನಿನಲ್ಲಿಂದ ಬಂದಿದ್ದೇವೆ ಎಂದು ಅವರಿಗೆ ಹೇಳಿದೆವು.

"ಅಪಘಾತಕ್ಕೀಡಾಯಿತೇ?!" ಎಂದು ಅವರು ಕೇಳಿದರು.

"ಗಾಯವಾಗಿದೆಯೇ?!" ಎಂದು ಕೇಳಿದರು. "ಹಾಗಾದರೆ ನೀವು ನಮ್ಮ ಆಸ್ಪತ್ರೆಗೆ ಬರಬೇಕು." ಎಂದು ಹೇಳಿದರು. ಹೀಗಾಗಿ ನಾವು ಇಲ್ಲಿಗೆ ಬಂದೆವು."





"ಯಾರಿಗೂ ಗಾಯವಾಗಲಿಲ್ಲವೇ?"
"ಶಿಕಾರಿ ಶಾಟ್ ಹೊರತುಪಡಿಸಿ ಯಾರಿಗೂ ಇಲ್ಲ."
ಡನ್ನೋ ಶಾಟ್‌ನ ಹಾಸಿಗೆಯ ಬಳಿಗೆ ಹೋದನು.
"ನಿನಗೇನಾಗಿದೆ?" ಎಂದು ಅವನು ಕೇಳಿದನು.
"ನನ್ನ ಪಾದದ ಗಂಟಿಗೆ ಉಳುಕು ಬಂದಿದೆ. ನನಗೆ ನಡೆಯಲು ಸಾಧ್ಯವೇ ಇಲ್ಲ. ಆದರೆ ನನ್ನನ್ನು ಕಾಡುತ್ತಿರುವುದು ಅದಲ್ಲ. ನನ್ನ ನಾಯಿ ಡಾಟ್ ಕಾಣೆಯಾಗಿದೆ. ಅದನ್ನು ನನಗಾಗಿ ಹುಡುಕಿಕೊಡಲು ಸಾಧ್ಯವಿಲ್ಲವೇ? ಅದು ಎಲ್ಲಿಯೋ ಇಲ್ಲೇ ಇರಬೇಕು, ಆದರೆ ನಾನು ಅದನ್ನು ಹುಡುಕಲು ಸಾಧ್ಯವಿಲ್ಲ. ಅದನ್ನು ಹುಡುಕು, ಒಳ್ಳೆಯ ಹುಡುಗ."
"ಹುಡುಕುತ್ತೇನೆ," ಎಂದು ಡನ್ನೋ ಹೇಳಿದನು. "ನಿನಗಾಗಿ ಅದನ್ನು ಹುಡುಕುತ್ತೇನೆ. ಆದರೆ, ನಾನೇ ಬಲೂನು ಮಾಡಿದ್ದೇನೆ ಎಂದು ನೀನು ಎಲ್ಲರಿಗೂ ಹೇಳಬೇಕು."
ಡನ್ನೋ ಪ್ರತಿಯೊಬ್ಬರ ಹಾಸಿಗೆಯ ಬಳಿಗೆ ಹೋಗಿ, ಬಲೂನು ಮಾಡಿದ್ದು ತಾನೇ ಎಂದು ಹೇಳುವಂತೆ ತನ್ನ ಎಲ್ಲ ಸ್ನೇಹಿತರಿಗೆ ಎಚ್ಚರಿಸಿದನು. ಕೊನೆಗೆ ಅವನು ಡಾಕ್ಟರರ ಕೋಣೆಗೆ ಹಿಂದಿರುಗಿದನು, ಅಲ್ಲಿ ಸ್ನೋಡ್ರಾಪ್ ಅವನಿಗಾಗಿ ಕಾಯುತ್ತಿದ್ದಳು.

“ನಿನ್ನ ಅಸ್ವಸ್ಥ ಸ್ನೇಹಿತರು ಹೇಗಿದ್ದಾರೆ?” ಎಂದು ಅವಳು ಕೇಳಿದಳು.
“ಅವರಿಗೆ ಏನೂ ತೊಂದರೆ ಇಲ್ಲ,” ಎಂದು ಡನ್ನೋ ನಗುತ್ತಾ ಹೇಳಿದನು. “ಶಾಟ್‌ಗೆ ಮಾತ್ರ ಏನೋ ತೊಂದರೆ ಇದೆ.”
“ಹಾಗಾದರೆ ಅವರು ಬೇಗನೇ ಆಸ್ಪತ್ರೆಯಿಂದ ಹೊರಬರಬಹುದೇ? ಎಷ್ಟು ಚೆನ್ನಾಗಿದೆ!” ಎಂದು ಸ್ನೋಡ್ರಾಪ್ ಹೇಳಿದಳು. “ನನಗೆ ಏನು ಯೋಚನೆ ಬಂದಿದೆ ಎಂಬುದು ಗೊತ್ತೇ? ಅವರು ಗುಣಮುಖರಾದುದನ್ನು ಆಚರಿಸಲು ನಾವು ಒಂದು ಔತಣಕೂಟ ಏರ್ಪಡಿಸೋಣ. ಅದು ಮೋಜಾಗಿರುವುದಿಲ್ಲವೇ?”
“ಅವರನ್ನು ಅಷ್ಟು ಬೇಗ ಹೊರಗೆ ಬಿಡುವ ಹಾಗೆ ಕಾಣುತ್ತಿಲ್ಲ,” ಎಂದು ಡನ್ನೋ ಹೇಳಿದನು.
ಅಷ್ಟರಲ್ಲಿ ಹನಿಸಕಲ್ ಮತ್ತು ಕಾರ್ನ್‌ಫ್ಲವರ್ ಹಿಂತಿರುಗಿ ಬಂದರು.
“ಆ ಅಪ್ರಾನನ್ನು ಹಾಕಿಕೊಳ್ಳಲು ನಿನಗೆ ಯಾರು ಹೇಳಿದರು?” ಎಂದು ಹನಿಸಕಲ್ ಕೋಪದಿಂದ ಕೇಳಿದಳು. “ಇಂಥ ಅವಿಧೇಯತೆಯನ್ನು ನಾನು ಎಂದೂ ಸಹಿಸಲಾರೆ!”
“ನಾನು ಅವಿಧೇಯನಾಗಿರಲಿಲ್ಲ,” ಎಂದು ಡನ್ನೋ ಹೇಳಿದನು. “ನನ್ನ ಸ್ನೇಹಿತರು ಹೇಗಿದ್ದಾರೆಂದು ನೋಡಲು ಹೋಗಿದ್ದೆ.”."



“ಅವರಲ್ಲಿ ಒಬ್ಬನನ್ನು ಹೊರತುಪಡಿಸಿ ಉಳಿದವರೆಲ್ಲರ ಆರೋಗ್ಯ ಸರಿಯಾಗಿದ್ದು ಆಸ್ಪತ್ರೆಯಿಂದ ಹೊರ ಬೀಳಬಹುದೆಂದು ನನಗೆ ಅನ್ನಿಸುತ್ತದೆ.”

“ಏನು?” ಎಂದು ಹನಿಸಕಲ್ ಭಯದಿಂದ ಹೇಳಿದಳು. “ಒಂದೇ ಸಲ ಹದಿನಾಲ್ಕು ಮೈಟ್ಸಹುಡುಗರನ್ನು ಹೊರಗೆ ಬಿಟ್ಟರೆ ಏನಾಗಬಹುದು ಎಂಬುದನ್ನು ಊಹಿಸಬಲ್ಲೆಯಾ? ಅವರು ಈ ಪಟ್ಟಣವನ್ನೇ ತಲೆಕೆಳಗೆ ಮಾಡಿಬಿಡುತ್ತಾರೆ! ಒಂದೂ ಮನೆಯ ಕಿಟಕಿ ಉಳಿಯುವುದಿಲ್ಲ, ನಮ್ಮೆಲ್ಲರ ದೇಹವೂ ಗಾಯಗೊಂಡು ಬುಗಟೆಗಳಿಂದ ತುಂಬಿಬಿಡುತ್ತದೆ. ಬುಗಟೆಗಳ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಯಲು ಈ ಹುಡುಗರನ್ನೆಲ್ಲ ಆಸ್ಪತ್ರೆಯಲ್ಲೇ ಇಡಬೇಕು.”

“ಬಹುಶಃ ಅವರನ್ನು ಒಬ್ಬೊಬ್ಬರಾಗಿ ಹೊರಗೆ ಬಿಡಬಹುದೇ?” ಎಂದು ಕಾರ್ನ್‌ಫ್ಲವರ್ ಸಲಹೆ ನೀಡಿದಳು. “ದಿನಕ್ಕೆ ಒಬ್ಬನಂತೆ, ಬಹುಶಃ?”

“ಅದು ತುಂಬಾ ನಿಧಾನ,” ಎಂದು ಸ್ನೋಡ್ರಾಪ್ ಮಧ್ಯೆ ಹೇಳಿದಳು. “ದಿನಕ್ಕೆ ಕನಿಷ್ಠ ಇಬ್ಬರು. ಒಬ್ಬೊಬ್ಬರನ್ನೇ ಬಿಡುವ ವೇಗದಲ್ಲಿ ನಾವು ಎಂದಿಗೂ ನೃತ್ಯಸಮಾರಂಭವನ್ನು ಏರ್ಪಡಿಸಲು ಸಾಧ್ಯವಾಗುವುದಿಲ್ಲ.”

“ದಿನಕ್ಕೆ ಒಬ್ಬರು,” ಎಂದು ಹನಿಸಕಲ್ ಪಟ್ಟುಹಿಡಿದಳು. “ನಾವು ಒಂದು ಪಟ್ಟಿಯನ್ನು ತಯಾರಿಸಿ ನಾಳೆಯಿಂದ ಅವರನ್ನು ಹೊರಗೆ ಬಿಡಲು ಪ್ರಾರಂಭಿಸೋಣ.”

“ದಿನಕ್ಕೆ ಇಬ್ಬರು,! ಇಬ್ಬರು!” ಎಂದು ಸ್ನೋಡ್ರಾಪ್ ಕೂಗುತ್ತಾ, ಹನಿಸಕಲ್‌ಳನ್ನು ತಬ್ಬಿಕೊಂಡು ಅವಳ ಕೆನ್ನೆಗೆ ಮುತ್ತಿಟ್ಟಳು. “ನನಗೆ ನೃತ್ಯಸಮಾರಂಭ ಏರ್ಪಡಿಸುವ ಆಸೆ ತುಂಬಾ ಇದೆ! ನೀನೂ ಬರಬೇಕು, ನೀನು ಎಷ್ಟು ಸುಂದರವಾಗಿ ನೃತ್ಯ ಮಾಡುತ್ತೀಯೆ!”

“ಸರಿ, ದಿನಕ್ಕೆ ಇಬ್ಬರು,” ಎಂದಳು ಹನಿಸಕಲ್. “ಚೆನ್ನಾಗಿ ವರ್ತಿಸುವವರಿಂದ ಪ್ರಾರಂಭಿಸೋಣ. ಇಲ್ಲಿ ನೀನು ನಮಗೆ ಸಹಾಯ ಮಾಡಬೇಕು,” ಎಂದು ಡನ್ನೋ ಕಡೆ ತಿರುಗಿ ಅವಳು ಹೇಳಿದಳು. “ಯಾರು ಚೆನ್ನಾಗಿ ವರ್ತಿಸುತ್ತಾರೆ?”

“ಅವರೆಲ್ಲರೂ ಚೆನ್ನಾಗಿ ವರ್ತಿಸುತ್ತಾರೆ,” ಎಂದ ಡನ್ನೋ.

“ಅದನ್ನು ನಾನು ನಂಬಲಾರೆ. ಮೈಟ್ಸಹುಡುಗರು ಎಂದಿಗೂ ಚೆನ್ನಾಗಿ ವರ್ತಿಸುವುದಿಲ್ಲ. ಅವರನ್ನು ಕಿಡಿಗೇಡಿತನದಿಂದ ದೂರವಿಡಲು ಯಾವಾಗಲೂ ಯಾವುದಾದರೂ ಕೆಲಸವನ್ನು ಯೋಚಿಸಬೇಕಾಗುತ್ತದೆ.”

“ಹಾಗಾದರೆ ಮೊದಲು ಬೆಂಡಮ್ ಮತ್ತು ಟ್ವಿಸ್ಟಮ್‌ರನ್ನು ಹೊರಗೆ ಬಿಡುವುದು ಉತ್ತಮ. ಅವರು ಹೊರಗೆ ಬಂದ ಕೂಡಲೇ ಕಾರನ್ನು ದುರಸ್ತಿ ಮಾಡಲು ಪ್ರಾರಂಭಿಸಬಹುದು,” ಎಂದಳು ಕಾರ್ನ್‌ಫ್ಲವರ್.

“ಅದ್ಭುತವಾದ ಆಲೋಚನೆ,” ಎಂದಳು ಹನಿಸಕಲ್. “ಹಾಗಾದರೆ ಬೆಂಡಮ್ ಮತ್ತು ಟ್ವಿಸ್ಟಮ್ ಪಟ್ಟಿಯಲ್ಲಿ ಮೊದಲಿಗರಾಗುತ್ತಾರೆ.”

ಅವರ ಹೆಸರುಗಳನ್ನು ಬರೆದುಕೊಳ್ಳಲಾಯಿತು..





“ಹಾಗಿದ್ದರೆ ನಾನು ಗ್ರಂಪ್ಸ್‌ನನ್ನು ಹೊರಬಿಡಲು ಇಷ್ಟಪಡುತ್ತೇನೆ,” ಎಂದಳು ಹನಿಸಕಲ್. “ಅವನು ಎಷ್ಟು ತೊಂದರೆ ಕೊಡುತ್ತಾನೆಂದರೆ, ಇಡೀ ದಿನ ಅಲ್ಲಿಯೇ ಮಲಗಿ ಗೊಣಗುತ್ತ ಇರುತ್ತಾನೆ!”

“ನೀನು ಹಾಗೆ ಮಾಡಕೂಡದು,” ಎಂದ ಡನ್ನೋ. “ಅವನ ಗೊಣಗುವಿಕೆ ಗುಣವಾಗುವವರೆಗೆ ಅವನನ್ನು ಆಸ್ಪತ್ರೆಯಲ್ಲೇ ಮಲಗಲು ಬಿಡು.”

“ಹಾಗಾದರೆ ಮುಂದೆ ಡಾ. ಪಿಲ್‌ಮನ್‌ನನ್ನು ಹೊರಗೆ ಬಿಡೋಣ. ಅವನು ನಮ್ಮ ಉಪಚಾರಗಳನ್ನು ಒಪ್ಪುವುದಿಲ್ಲ ಮತ್ತು ನಾವು ಮಾಡುವ ಪ್ರತಿಯೊಂದನ್ನೂ ಟೀಕಿಸುತ್ತಾನೆ. ಅವನ ಮಾತುಗಳನ್ನು ಕೇಳುತ್ತಿರಬೇಕಾಗುವುದು ತುಂಬಾ ಕಷ್ಟ. ಅವನನ್ನು ತೊಲಗಿಸಿಬಿಡಲು ನನಗೆ ತುಂಬಾ ಸಂತೋಷವಾಗುತ್ತದೆ.”

“ಅವನನ್ನೂ ಹೊರಗೆ ಬಿಡಬಾರದು,” ಎಂದ ಡನ್ನೋ. “ಅವನು ತನ್ನ ಇಡೀ ಜೀವನವನ್ನೇ ಇತರರ ಚಿಕಿತ್ಸೆ ನೀಡುತ್ತಲೇ ಕಳೆದಿದ್ದಾನೆ, ಈಗ ಅವನಿಗೂ ಅದರ ಒಂದು ಡೋಸ್ ಸಿಗಲಿ. ಆಮೇಲೆ ಬ್ಲಾಬ್ಸ್‌ನನ್ನು ಹೊರಗೆ ಬಿಡು. ಅವನು ಒಳ್ಳೆಯ ಕಲಾವಿದ, ಮತ್ತು ಅವನಿಗೆ ತಕ್ಷಣವೇ ಕೆಲಸ ಹುಡುಕಿಕೊಡುತ್ತೇವೆ. ಅವನು ನನ್ನ ಶಿಷ್ಯ. ಚಿತ್ರ ಬಿಡಿಸಲು ಅವನಿಗೆ ಕಲಿಸಿದವನು ನಾನೇ.”

“ಓಹ್, ಹಾಗೆ ಮಾಡುವ!” ಎಂದು ಸ್ನೋಡ್ರಾಪ್ ಬೇಡಿಕೊಂಡಳು. “ಅವನನ್ನು ಈ ಕ್ಷಣವೇ ಹೊರಗೆ ಬಿಡಲು ಸಾಧ್ಯವಿಲ್ಲವೇ? ನನ್ನ ಭಾವಚಿತ್ರವನ್ನು ಚಿತ್ರಿಸಲು ನಾನು ಅವನನ್ನು ಕೇಳುತ್ತೇನೆ.”

“ಮತ್ತು ಟ್ರಿಲ್ಸ್,” ಎಂದು ಡನ್ನೋ ಹೇಳಿದನು. “ಅವನೂ ನನ್ನ ಶಿಷ್ಯನೇ. ನಾನು ಅವನಿಗೆ ಕೊಳಲು ನುಡಿಸುವದನ್ನು ಕಲಿಸಿದ್ದೇನೆ.”
ಸ್ನೋಡ್ರಾಪ್ ಮತ್ತೆ ಹನಿಸಕಲ್‌ಳನ್ನು ಅಪ್ಪಿಕೊಂಡಳು.
“ಬ್ಲಾಬ್ಸ್ ಮತ್ತು ಟ್ರಿಲ್ಸ್‌ರನ್ನು ಹೊರಗೆ ಬಿಡಿ,” ಎಂದು ಅವಳು ಹೇಳಿದಳು. “ದಯವಿಟ್ಟು, ದಯವಿಟ್ಟು ಹಾಗೆ ಮಾಡಿ!”
“ಅವರ ವಿಷಯದಲ್ಲಿ ಮಾತ್ರ ನಾನು ಒಂದು ಅಪವಾದ ಮಾಡಬಹುದೆಂದು ತೋರುತ್ತದೆ,” ಎಂದಳು ಅವಳು. “ಆದರೆ ಉಳಿದವರು ತಮ್ಮ ಸರದಿಗಾಗಿ ಕಾಯಬೇಕಾಗುತ್ತದೆ.”
ಕೊನೆಗೂ ಪಟ್ಟಿ ಸಿದ್ಧವಾಯಿತು. ಬ್ಲಾಬ್ಸ್ ಮತ್ತು ಟ್ರಿಲ್ಸ್‌ರ ಬಟ್ಟೆಗಳನ್ನು ಅವರಿಗೆ ಹಿಂದಿರುಗಿಸುವಂತೆ ಹನಿಸಕಲ್ ಆದೇಶಿಸಿದಳು. ಕೆಲವು ನಿಮಿಷಗಳ ನಂತರ ಅವರಿಬ್ಬರೂ ಸಂತೋಷದಿಂದ ಮುಖ ಅರಳಿಸಿಕೊಂಡು ಅವಳ ಕಚೇರಿಯಲ್ಲಿ ಕಾಣಿಸಿಕೊಂಡರು.
“ನಾವು ನಿಮ್ಮನ್ನು ಹೊರಗೆ ಬಿಡುತ್ತಿದ್ದೇವೆ,” ಎಂದಳು ಹನಿಸಕಲ್. “ನೀವು ಒಳ್ಳೆಯ ರೀತಿಯಲ್ಲಿ ವರ್ತಿಸುವುದನ್ನು ನೋಡಿಕೊಳ್ಳಿ, ಇಲ್ಲವಾದರೆ ನಿಮ್ಮನ್ನು ನೇರವಾಗಿ ಮತ್ತೆ ಆಸ್ಪತ್ರೆಗೆ ಕಳುಹಿಸುತ್ತೇವೆ.”







